


ಎಡದಿಂದ ಬಲಕ್ಕೆ:

1. ಪ್ರಭಾವ ತೋರಿಸುವಂತಾಗಿದೆ ಒಳ್ಳೆಯ ಬೆಳಗು (4)
3. ನಾಲ್ಕೇ ಏನಿಲ್ಲ, ಎಲ್ಲವೂ (3)
4. ಸೇಬಿನ ಮರ ಸಿಕ್ಕಿದ್ದು ಭಾರೀ ಅದೃಷ್ಟ (3)
6. ಆ ಬೆಕ್ಕಿನ ಸ್ವಭಾವ ಹೆದರಿಸುವಂತಿದೆ (4)
7. ಕಷ್ಟ ನಿವಾರಕ–ಗೀತಾಚಾರ್ಯನ ಎಂಟು ಪದ್ಯಗಳ ಸ್ತೋತ್ರ (4)
9. ಆಗುತ್ತಿರುವುದು, ನಡೆದು ಹೋದದ್ದು–ಒಟ್ಟಾರೆ ಸಮಾಚಾರ (4)
11. ಕೊಳ್ಳುವವರು ಬಹಳ ಇಲ್ಲ. ಅದೇ ಚಿಂತೆ (4)
13. ಕೆಲಸ ಮಾಡುವವರ ನಡುವೆ ಒಬ್ಬ ಕೋಮಲ ವ್ಯಕ್ತಿ (4)
15. ಅಂದವಾದದ್ದನ್ನು ತೋರಿದೊಡನೆ ಅಲ್ಲೇ ಮಾಯ (4)
17. ತೊಂಡೆಕಾಯಿ ಬೇಕೆಂದರೆ ಇಲ್ಲಿ ಹುಡುಕು (3)
18. ಗೋಡೆ ಏರುವಾಗ ಕಂಡದ್ದು ವಿಷ್ಣುವಿನ ವಾಹನ (3)
19. ವರ್ಷವೇನೇ ಇರಲಿ, ವಾರಾಂತ್ಯದ ದಿನ ಅದೇ (4)

ಮೇಲಿಂದ ಕೆಳಕ್ಕೆ:

1. ಬಳಸು ಹಾದಿಯೇ ಅಲ್ಲಿ ಸಲೀಸು (3)
2. ಆತಂಕವನ್ನು ನಿವಾರಿಸುವವರೆಗೂ... (3)
3. ಕಷ್ಟ ನಷ್ಟ ನೀಗುತ್ತ ಅತ್ಯಂತ ಕೀಳಾದ (3)
5. ಗಾಬರಿ ಬೇಡ. ಅದು ಬರೀ ನೊರೆ (3)
7. ಖುಷಿಯ ಸಮಯಕ್ಕೆ ಕಾಯುತ್ತಲೇ ಇದ್ದಾನೆ ರೈತ (3)
8. ಕೊರಳನ್ನೇ ತಿರುಚುವುದೇ? ಎಷ್ಟು ಘೋರ! (3)
9. ಅಲ್ಲೇ ಸುತ್ತುತ್ತಿರುವ ಶಬ್ದ ಕೇಳಿಸಿಕೊ (3)
10. ಗುಡ್ಡ ಎಂಥವರ ವಿಶ್ರಾಂತಿಗೆ ಬಟ್ಟೆಮನೆ (3)
12. ವರ್ತನೆ ಬದಲಿಸಬೇಕೆಂದು ಭಾರೀ ಒತ್ತಾಯ (3)
14. ಕಾಡಿನವರ ನಡುವೆ ಒಬ್ಬ ದೃಷ್ಟಿಹೀನ (3)
15. ಆಕಾಶದೆತ್ತರ ಆಸೆ ನಿಯಂತ್ರಿಸಲು ಚುಚ್ಚು ಗೋಲು (3)
16. ಗಮನವಿರಲಿ ಅದು ಭಾರೀ ಶಹರ (3)

### ಪದಬಂಧ 10-01-2013 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಸಂವಾದ; 3. ಬಲ್ಲಿದ; 4. ಬಡಿಗೆ; 6. ಮನುಕುಲ; 7. ಆಯವ್ಯಯ; 9. ನವನೀತ; 11. ಪರಿಮಳ; 15. ಸುಮ್ಮಾನ; 16. ವಲ್ಲಭ; 17. ಕರಾರು.

ಮೇಲಿಂದ ಕೆಲಕ್ಕೆ:

1. ಸಂದರ್ಭ; 2. ದಬರಿ; 3. ಬದುಕು; 5. ಗೆಳೆಯ; 6. ಮದನ; 8. ಯಮಳ; 10. ನೀಗಿಸು; 12. ರಿಷಭ; 13. ಬೆನಕ; 14. ತವರು.

# ಪ್ರಶ್ನಾಂಕಣ

## ದೀಪಗಳ ಮೇಲೇಕೆ ಕೀಟಗಳ ದಾಳಿ?

ಪ್ರತಿ ನಿತ್ಯ ಇರುಳು ಕವಿದೊಡನೆ, ದೀಪ ಹಚ್ಚಿದೊಡನೆ ಆರಂಭವಾಗುವ ಕೀಟಗಳ ನಡವಳಿಕೆಯೊಂದನ್ನು ನೀವೂ ಗಮನಿಸಿದ್ದೀರಾ? ಹಚ್ಚಿರುವ ದೀಪ ಯಾವುದೇ ಇರಲಿ ಅದರತ್ತ ವಿವಿಧ ಕೀಟಗಳು ಹಾರಿ ಬರುತ್ತವೆ. ಅದರ ಸುತ್ತಲೇ ಸುತ್ತುತ್ತ ಡಿಕ್ಕಿ ಹಾಕುತ್ತ ನೆಲಕ್ಕೆ ಬೀಳುತ್ತವೆ. ಅಥವಾ ದೀಪದ ಜ್ವಾಲೆಗೇ ಎರಗಿ ಮೈ ಸುಟ್ಟುಕೊಂಡು ನೆಲ ಕಚ್ಚುತ್ತವೆ. ಹೌದಲ್ಲ? ಈ ವಿದ್ಯಮಾನದ ಮೊದಲ ವಿಸ್ಮಯ ಏನೆಂದರೆ ಹೀಗೆ ದೀಪಗಳನ್ನು ಮುತ್ತುವ ಕೀಟಗಳೆಲ್ಲ ಬರೀ ಗಂಡುಗಳು; ಹೆಣ್ಣು ಕೀಟಗಳಿಗೆ ಈ ದೀಪ ವ್ಯಾಮೋಹ ಕಿಂಚಿತ್ತೂ ಇಲ್ಲ!

ನಿಶಾಚರ ಜೀವನದ ಕೀಟಗಳ ಗಂಡುಗಳು ಮಾತ್ರ ದೀಪಗಳತ್ತ ಧಾವಿಸಿ ಬರುತ್ತವೆ ಎಂದೊಡನೆಯೇ ಅವುಗಳನ್ನು ಆಕರ್ಷಿಸುವುದು ದೀಪದ ಬಣ್ಣ–ಬೆಳಕುಗಳಲ್ಲ ಎಂಬುದು ಸ್ಪಷ್ಟ ತಾನೇ? ವಾಸ್ತವ ಏನೆಂದರೆ ದೀಪಗಳನ್ನೇ ತಮ್ಮ ಹೆಣ್ಣು ಸಂಗಾತಿಗಳೆಂದು ತಪ್ಪಾಗಿ ಗ್ರಹಿಸಿ ಭ್ರಮಿಸಿ ಧಾವಿಸಿ ಗಂಡುಗಳು ಹಾರಿ ಬರುತ್ತವೆ. ಹತ್ತಿರ ಬಂದ ಮೇಲೂ ಹಾಗೆಯೇ ನಂಬುತ್ತವೆ; ದುರಂತ ಕಾಣುತ್ತವೆ.



ಹೀಗೆಲ್ಲ ಆಗುವುದು ಹೇಗೆ?

ಸಂತಾನ ಕಾಲದಲ್ಲಿ ಹೆಣ್ಣು ಕೀಟಗಳು 'ಫೀರಮೋನ್' ಎಂಬೊಂದು ವಿಶಿಷ್ಟ ವಾಸನಾ ರಾಸಾಯನಿಕವನ್ನು ತಮ್ಮ ಶರೀರದ ವಿಶೇಷ ಅಂಗವೊಂದರಿಂದ ಸ್ರವಿಸುತ್ತವೆ. ಅತ್ಯಲ್ಪ ಪ್ರಮಾಣದಲ್ಲಿ ಜಿನುಗುವ ಫೀರಮೋನ್‌ನ ಕಂಪು ಗಾಳಿಯಲ್ಲಿ ಹರಡುತ್ತದೆ. ತಮ್ಮ ಅತ್ಯಂತ ಸಮರ್ಥ ಘ್ರಾಣೇಂದ್ರಿಯಗಳ ಮೂಲಕ (ಚಿತ್ರ ನೋಡಿ) ಗಂಡು ಕೀಟಗಳು ಆ ಕಂಪನ್ನು ಬಹು ದೂರದಲ್ಲೂ ಗುರುತಿಸುತ್ತವೆ. ಹಾಗೆ ಹೆಣ್ಣು ಕೀಟ ಇರುವ ದಿಕ್ಕನ್ನು ಗುರುತಿಸುವ ಎಲ್ಲ ಗಂಡುಗಳೂ ಅದರತ್ತ ಧಾವಿಸಿಬರುತ್ತವೆ.

ಸೋಜಿಗ ಏನೆಂದರೆ ಹೆಣ್ಣು ಕೀಟಗಳು ಸ್ರವಿಸುವ ಈ ರಾಸಾಯನಿಕದಿಂದ ಒಂದು ವಿಧದ 'ಶಕ್ತಿಯ ಅಲೆ'ಗಳೂ ಹೊಮ್ಮುತ್ತವೆ. ಆ ಅಲೆಗಳ ತರಂಗಾಂತರ 'ಅವಗೆಂಪು ವಿಕಿರಣ'ದ ಎಂದರೆ ಶಾಖ ಶಕ್ತಿಯ ತರಂಗಾಂತರವನ್ನೇ ಹೋಲುತ್ತದೆ. ಬೆಳಕನ್ನು ಹೊಮ್ಮಿಸುವ ಯಾವುದೇ ದೀಪವೂ ಕೂಡ ಸಹಜವಾಗಿಯೇ ಅವಗೆಂಪು ವಿಕಿರಣವನ್ನೂ ಉತ್ಸರ್ಜಿಸುತ್ತದೆ. ಹಾಗಾಗಿ ತಾವು ಗುರುತಿಸುವ ಎಲ್ಲ ಅವಗೆಂಪು ಮೂಲಗಳೂ ಹೆಣ್ಣು ಕೀಟಗಳೆಂದೇ ಗಂಡುಗಳು ಭಾವಿಸಿ ದೀಪಗಳ ಮೇಲೆ ಎರಗುತ್ತವೆ. ದೀಪಗಳೊಡನೆಯೇ ಸಂಗಕ್ಕೆಳಸುತ್ತವೆ. ದೀಪಗಳ ಬಿಸಿಗೋ, ಬೆಂಕಿಯ ಜ್ವಾಲೆಗೋ ತಗುಲಿ ಸುಟ್ಟುಬೀಳುತ್ತವೆ. ಇಲ್ಲವೇ ಅಲ್ಲೇ ಕಾದುಕುಳಿತು ಹಲ್ಲಿಗಳಿಗೆ ಆಹಾರವಾಗುತ್ತವೆ.

■ ಎನ್. ವಾಸುದೇವ್